ದಿನಾಂಕಃ **08-11-2022**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರ ವೈ ಆರ್ ಬಿ ವಕೀಲರಿಂದಃ</u>

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನಾನು ಸಹಾಯಕ ಉದ್ಯೋಗಾಧಿಕಾರಿಯಾಗಿದ್ದು ಸರ್ಕಾರಿ ನೌಕರನಾಗಿದ್ದು ನಿವೃತ್ತಿ ಹೊಂದಿದ್ದೇನೆ ಎಂದರೆ ಸರಿ. ನಿಆರ್ -16 ರ ದಾಖಲೆಯಂತೆ ಅ.ದಾ.9/10 ನ್ನು ಒಟ್ಟು 5 ಎಕರೆ ಸ್ವತ್ತಿಗೆ ಮಾಲೀಕನೆಂದು ಘೋಷಿಸಿ ನನ್ನ ಸ್ವತ್ತಿಗೆ ತಂಟೆ ತಕರಾರು ಮಾಡದಂತೆ ನಿಷೇದಾಜ್ಞೆ ನೀಡಬೇಕೆಂದು ದಾಖಲಿಸಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ಜಮೀನನ್ನು ಅಳತೆ ಮಾಡಲು ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಲಾಗಿತ್ತು ಎಂದರೆ ಸರಿ.

ನಿಆರ್-19 ದಾಖಲೆಯಲ್ಲಿರುವ ವಿಚಾರಗಳು ತಪ್ಪಾಗಿದೆ. ಆಯುಕ್ತರ ವರದಿಯನ್ನು ನಾವು ಪ್ರಶ್ನೆ ಮಾಡಿದ್ದೇವೆ. ಪ್ರಶ್ನೆ ಮಾಡಿದ್ದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅ.ದಾ.9/10 ದ್ಾವೆಯಲ್ಲಿ ನಾನು 4 ಎಕರೆ ಸ್ವತ್ತಿಗೆ ಮಾತ್ರ ಮಾಲೀಕನೆಂದು ನ್ಯಾಯಾಲಯ ಘೋಷಣೆ ಮಾಡಿದೆ ಎಂದರೆ ಸರಿ. ಅದನ್ನು ನಾನು ಪ್ರಶ್ನೆ ಮಾಡಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್ ಎ 15/2016 ರಲ್ಲಿ ಮೇಲ್ಮನವಿ ಸಲ್ಲಿಸಿದ್ದೇ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ಕೆಳ ನ್ಯಾಯಾಲಯದ ತೀರ್ಪು ಊರ್ಜಿತ ಎಂದು ನನ್ನ ಅಪೀಲನ್ನು ವಜಾ ಮಾಡಿದೆ ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನೆ ಮಾಡಿ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ 1084/2019 ರಂತೆ ಪ್ರಶ್ನೆ ಮಾಡಿದ್ದೆನು ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ನೀಡಿಲ್ಲ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಸ್ತುತ ಕೇಸ್ ನ ಅರ್ಜಿದಾರನ ಪರವಾಗಿ ಕಳೆದ ವಾರ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಸ.ನಂ.467 ರಲ್ಲಿ ವಿಸ್ತೀರ್ಣ 3 ಎಕರೆ 20 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಅರ್ಜಿದಾರರಾದ ಲಕ್ಷ್ಮಯ್ಯನವರು ಮಾಲೀಕರೆಂದು ಘೋಷಣೆ ಮಾಡಿ ತಂಟೆ ತಕರಾರು ಮಾಡಬಾರದು ಎಂದು ತೀರ್ಪು ನೀಡಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ , ನಾನು ತಂಟೆ ತಕರಾರು ಮಾಡಿಲ್ಲ ಎಂದು ನುಡಿಯುತ್ತಾರೆ. ಅ.ದಾ.32/2005 ದಾವೆಯನ್ನು ಲಕ್ಷ್ಮಯ್ಯ ನನ್ನ ವಿರುದ್ಧ 3 ಎಕರೆ 20 ಗುಂಟೆ ದಾಖಲಿಸಿದ್ದು , ಅದು ಅರ್ಜಿದಾರರ ಪರ ಡಿಕ್ರಿಯಾಗಿದ್ದು ಸದರಿ ತೀರ್ಪಿನ ವಿರುದ್ಧ ಆರ್ ಎ 22/10 ನ್ನು ದಾಖಲಿಸಿದ್ದೆನು ಎಂದರೆ ಸರಿ. ಸದರಿ ಅಪೀಲು ವಜಾ ಆಗಿತ್ತು ಎಂದರೆ ಸರಿ. ಆರ್ ಎ 22/10 ಆದೇಶದ ವಿರುದ್ಧ ನಾನು ಇದುವರೆಗೂ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ.

ಅರ್ಜಿದಾರರು ಸದರಿ ಸ್ವತ್ತಿನಲ್ಲಿ ಮಣ್ಣು ಹಾಕಿ ಸಮತಟ್ಟು ಮಾಡಿ ತಂತಿ ಬೇಲಿ ಹಾಕಿಕೊಳ್ಳುತ್ತಿದ್ದಾಗ ನಾನು ತಂಟೆ ತಕರಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನನ್ನ ವಿರುದ್ಧ ಕಳ್ಳಂಬೆಳ್ಳ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ನೆನಪಿಲ್ಲ. ಅರ್ಜಿದಾರರು ನನ್ನ ವಿರುದ್ಧ ದೂರು ನೀಡಿದ್ದರಿಂದ ನಾನು ಪೋ.ಠಾಣೆಗೆ ಹೋಗಿ ಮುಚ್ಚಳಿಕೆ ಬರೆದುಕೊಟ್ಟಿದ್ದೆನು ಎಂದರೆ ಸರಿಯಲ್ಲ. ಅರ್ಜಿದಾರರ 3 ಎಕರೆ 20 ಗುಂಟೆ ಸ್ವತ್ತಿಗೆ ತಂತಿ ಬೇಲಿ ಹಾಕಿಕೊಳ್ಳಲು ನನ್ನ ತಕರಾರು ಇಲ್ಲ.

ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಅರ್ಜಿದಾರರ ಸ್ವತ್ತನ್ನು ಲಪಟಾಯಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 4 ಎಕರೆ ಸ್ವತ್ತಿಗೆ ಮಾತ್ರ ಮಾಲೀಕನೆಂದು ನ್ಯಾಯಾಲಯವು ಘೋಷಣೆ ಮಾಡಿದ್ದರೂ ನಾನು 5 ಎಕರೆ ಮಾಲೀಕ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.